ಕಾರ್ಯಪಾಲಕ ಅಭಿಯಂತರರ ಕಛೇರಿ
ಲೋಇ, ಬೆಂಗಳೂರು ವಿಭಾಗ,
ಲೋಇ ಅನೆಕ್ಸ್ ಕಟ್ಟಡ 2ನೇ ಮಹಡಿ
ಕೆ.ಆರ್.ವೃತ್ತ ಬೆಂಗಳೂರು 01

ದೂರವಾಣಿ : 080-22133370
ಫ್ಯಾಕ್ಸ್: 080-22133365
ಇ ಮೇಲ್:eepwdbngdn@yahoo.com

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಸಂಖ್ಯೆ:ಕಾನಿಇಂ:ಬೆಂವಿ:ಎಇ-1:2021-22 | 1067 ದಿ: 8/7/21

"ನೊಂದಾಯಿತ ಅಂಚೆ ಮತ್ತು ಸ್ವೀಕೃತಿ"

ರವರಿಗೆ:-

**Secretary,**
Marigold Trust,
'Marigold Square' No. 17, ITI Layout,
30th Main Road, Sarakki, Bangalore – 560078.

ಮಾನ್ಯರೇ,

ವಿಷಯ:- ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ MARIGOLD INTERNATIONAL SCHOOL ಶಾಲೆ ಪ್ರಾರಂಭಿಸಲು ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- 1. ತಮ್ಮ ಮನವಿ ದಿನಾಂಕ:- 16.04.2021 ಮತ್ತು 03.07.2021
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: 2021-22/135 ದಿನಾಂಕ: 07.07.2021

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, MARIGOLD INTERNATIONAL SCHOOL ಶಾಲಾ ವಿದ್ಯಾಸಂಸ್ಥೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶಿಕ್ಷಣ ಇಲಾಖೆಗೆ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (1) ರ ಪತ್ರದಲ್ಲಿ ಕೋರಿರುತ್ತೀರಿ.

ಅದರಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, MARIGOLD INTERNATIONAL SCHOOL ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪ-ವಿಭಾಗ, ಬೆಂಗಳೂರು ಹಾಗೂ MARIGOLD INTERNATIONAL SCHOOL ರವರ ನೋಂದಾಯಿತ ಸ್ಟ್ರಕ್ಚರಲ್ ಇಂಜಿನಿಯರ್ ರವರ ಉಪಸ್ಥಿತಿಯಲ್ಲಿ ಕಟ್ಟಡ ಪರಿವೀಕ್ಷಣೆ ಕೈಗೊಳ್ಳಲಾಗಿರುತ್ತದೆ. ಸದರಿ ತಂಡದೊಂದಿಗೆ ಕಟ್ಟಡದ ಪರಿವೀಕ್ಷಣೆ ನಡೆಸಲಾಗಿ ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ.

ಸದರಿ ಕಟ್ಟಡವು ಶೈಕ್ಷಣಿಕ ಉದ್ದೇಶಕ್ಕೆ ಸೂಕ್ತವಾಗಿರುವುದರ ಬಗ್ಗೆ ಪರಿಶೀಲಿಸಿ National Building Code of India ಮಾನದಂಡಗಳಂತೆ ಪರಿಶೀಲಿಸಲಾಗಿರುತ್ತದೆ. ಕಟ್ಟಡದ ನಕ್ಷೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರಾಮೋಹಳ್ಳಿ ಗ್ರಾಮ ಪಂಚಾಯಿತಿ, ಬೆಂಗಳೂರುರವರು ಅನುಮೋದನೆ ನೀಡಿದ್ದು, ಅನುಮೋದಿತ ನಕ್ಷೆಯಲ್ಲಿ ನೆಲಮಹಡಿ ಹಾಗೂ ಮೂರು ಮೇಲು ಮಹಡಿಗಳನ್ನು ನಿರ್ಮಿಸಲು ಅನುಮತಿ ನೀಡಲಾಗಿರುತ್ತದೆ.

ಸದರಿ ಕಟ್ಟಡದ ನಾಲ್ಕು ಮಹಡಿಗಳನ್ನು ಒಳಗೊಂಡಂತೆ 2020-21ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಮುಂದುವರೆದು, ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ಉಲ್ಲೇಖ (2) ರ ಪತ್ರದಲ್ಲಿ ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ ದಿನಾಂಕ:-30.06.2021 ರಂದು GOOLY CONSULTANCY SERVICES, NABL Accredited & ISO 9001-2008 Certified Testing Laboratory ಮುಖಾಂತರ ಪರೀಕ್ಷೆಗಳನ್ನು ಕೈಗೊಂಡು, ಸಮಾಲೋಚಕರೊಂದಿಗೆ ಉಪವಿಭಾಗದ ತಾಂತ್ರಿಕ ವರ್ಗವು ನಡೆಸಿರುವ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡುಬಂದಿರುತ್ತದೆಂದು ವರದಿ ಮಾಡಿರುತ್ತಾರೆ.

- MARIGOLD INTERNATIONAL SCHOOL ರವರು ಕಟ್ಟಡವನ್ನು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಛಳ್ಳಘಟ್ಟ ಗ್ರಾಮದ ಸರ್ವೇ ನಂ:31/2 ಮತ್ತು 32/3 ರಲ್ಲಿ ನಿರ್ಮಿಸಲಾಗಿರುತ್ತದೆ.
- ಪಂಚಾಯತ್ ಅಭಿವೃದ್ಧಿ ಪ್ರಾಧಿಕಾರಿ, ರಾಮೋಹಳ್ಳೀ ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಂದ ಅನುಮೋದನೆಯಾದ ನಕ್ಷೆಯಂತೆ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ.

- ಸದರಿ ಕಟ್ಟಡವನ್ನು RAJENDRAN N.S. Structural Engineer, Registration No.BCC/BL-3.6/SE.0289/2018-19 ರವರು ನೀಡಿರುವ ಸ್ಟ್ರಕ್ಚರಲ್ ವಿನ್ಯಾಸದಂತೆ ನಿರ್ಮಿಸಲಾಗಿರುತ್ತದೆ.
- Ultrasonic Pulse Velocity Test
  Conducting Ultrasonic pulse velocity test for compressive strength of in-situ concrete on Columns, Beams and Slab at Critical points using **"PUNDIT Lab+" (Portable ultrasonic non-destructive Digital indicating Tester)** equipment form **M/s. Proceq Switzerland,** as per the guidelines in Indian Standards **(IS: 516 (Par 5/Sec 1):2018)** ಪರೀಕ್ಷೆಯನ್ನು **GOOLY CONSULTANCY SERVICES** ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತ್ತಾರೆ.
- Recognizance, visual inspection fo Building-cracks, rusting of reinforcement, distress etc. ಪರೀಕ್ಷೆಯನ್ನು GOOLY CONSULTANCY SERVICES ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತಾರೆ.
- ಕಟ್ಟಡವು **National Building code of India 2016** ರ ಮಾನದಂಡದಂತೆ ನಿರ್ಮಿಸಿ ಸುರಕ್ಷಿತವಾಗಿರುವುದಾಗಿ **RAJENDRAN N.S. Structural Engineer, Registration No.BCC/BL-3.6/SE.0289/2018-19** ರವರು ಧೃಢೀಕರಿಸಿ ನೀಡಿರುವ ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ.
- **National Building code of India 2016** ರ ಅನ್ವಯ Form for Certificate for Structural Design Sufficiency ಪ್ರಮಾಣ ಪತ್ರವನ್ನು **RAJENDRAN N.S. Structural Engineer, Registration No.BCC/BL-3.6/SE.0289/2018-19** ರವರು ನೀಡಿರುತ್ತಾರೆ. (Annex-C)
- **National Building code of India 2016** ರ ಅನ್ವಯ Form for Engagement of Building / Constructor ಪ್ರಮಾಣ ಪತ್ರವನ್ನು Secretary, Marigold Trust ರವರು ನೀಡಿರುತ್ತಾರೆ. (Annex-D)

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ GOOLY CONSULTANCY SERVICES, NABL Accredited & ISO 9001-2008 Certified Testing Laboratory **& RAJENDRAN N.S. Structural Engineer, Registration No.BCC/BL-3.6/SE.0289/2018-19** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡ ನೀಡಿರುವ ವರದಿ ಹಾಗೂ ಖುದ್ದು ಪರಿಶೀಲಿಸಿ ಕಟ್ಟಡವು **"Structurally Stable"** ಇರುವುದಾಗಿ ಪರೀಕ್ಷಾವರದಿಗಳಿಂದ ಕಂಡುಬಂದಿರುವುದರಿಂದ, ಈ ಕೆಳ ಸಹಿ ಮಾಡಿರುವವರು ದಿ: 01.07.2021 ರಂದು ಖುದ್ದಾಗಿ ಪರಿವೀಕ್ಷಿಸಿದ್ದು MARIGOLD INTERNATIONAL SCHOOL ಕಟ್ಟಡವು **"Structurally Stable"** ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ಲೋಇ., ಬೆಂಗಳೂರು ವಿಭಾಗ,
ಬೆಂಗಳೂರು.

Kaveri
PRINCIPAL
MARIGOLD INTERNATIONAL SCHOOL
ANCHEPALYA, BANGALORE - 560 074.

DIRECTOR
MARIGOLD INTERNATIONAL SCHOOL
ANCHEPALYA, BANGALORE - 560 074.